ಗಾಂಧಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಕೊಟ್ಟ ಅರಣ್ಯ ಭೂಮಿ.

1072 (1435): ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ):–

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗಾಂಧೀ ಕೃಷಿ ವಿಜ್ಞಾನ ಕೇಂದ್ರ (ಕೃಷಿ ವಿಶ್ವವಿದ್ಯಾನಿಲಯ) ಯಾವಾಗ ಪ್ರಾರಂಭವಾಯಿತು;

ಆ. ಈ ವಿಶ್ವವಿದ್ಯಾನಿಲಯಕ್ಕೆ ಅರಣ್ಯ ಇಲಾಖೆಯು ನೀಡಿದ ಭೂಮಿಯ ವಿಸ್ತೀರ್ಣವೆಷ್ಟು;

ಇ. ಇದರ ಎಲ್ಲೆಯನ್ನು ನಿಗದಿಪಡಿಸಿ, ಬೇಲಿ ಹಾಕಲಾಗಿದೆಯೇ;

ಈ. ಸುತ್ತಮುತ್ತಲಿರುವ ಸಾರ್ವಜನಿಕರಿಂದ ಒತ್ತುವರಿಯಾಗಿದೆಯೇ;

ಉ. ಹಾಗಿದ್ದಲ್ಲಿ, ಕೃಷಿ ವಿಶ್ವವಿದ್ಯಾನಿಲಯಕ್ಕೆ ಸೇರಿದ ಎಲ್ಲಾ ಭೂಮಿಯನ್ನು ಸರ್ವೆ ಮಾಡಿಯಾರಿಂದ ಎಷ್ಟು ಭೂಮಿ ಒತ್ತುವರಿಯಾಗಿದೆ ಎಂಬುದನ್ನು ಕಂಡು ಹಿಡಿಯುವರೆ;

ಊ. ಕೃಷಿ ವಿಶ್ವವಿದ್ಯಾನಿಲಯದ ಜಮೀನಿನಲ್ಲಿ ಬೇರೆ ಯಾವುದಾದರೂ ಸಂಸ್ಥೆಗೆ ಜಮೀನು ವರ್ಗಾವಣೆ ಮಾಡಲಾಗಿದೆಯೇ;

ಋ. ಹಾಗಿದ್ದಲ್ಲಿ ಅಂಥ ಸಂಸ್ಥೆಗಳ ಹೆಸರೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ಕೃಷಿ ವಿಶ್ವವಿದ್ಯಾನಿಲಯ 1963ರಲ್ಲಿ ಅಸ್ತಿತ್ವಕ್ಕೆ ಬಂದಿತು. ಗಾಂಧಿ ಕೃಷಿ ವಿಜ್ಞಾನ ಕೇಂದ್ರ 1969ರಲ್ಲಿ ಸ್ಥಾಪಿತವಾಯಿತು.

ಆ. 705 ಎಕರೆ.

ಇ. ಹೌದು.

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಹೌದು. 21–10 ಎಕರೆ ಜಮೀನನ್ನು 50 ವರ್ಷ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.

ಋ. ಟಾಟಾ ಮೂಲಭೂತ ವಿಜ್ಞಾನ ಸಂಶೋಧನಾ ಸಂಸ್ಥೆ, ಬೊಂಬಾಯಿ.

ಗುಲ್ಬರ್ಗ ವಿಭಾಗದಲ್ಲಿ ಸರ್ವೇಯರುಗಳ ಸಂದರ್ಶನ ಪಟ್ಟಿಯ ಬಿಡುಗಡೆಗೆ ಒತ್ತಾಯ

1074 (1911): ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ):–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಇತ್ತೀಚೆಗೆ ಸರ್ಕಾರದವರು ಸರ್ವೇಯರ್ ಸಂದರ್ಶನ ನಡೆಸಿದ್ದು ನಿಜವಲ್ಲವೇ;